MOTION TO PASS

SRI M. VEERAPPA MOILY(Minister for Finance).—Sir, I move:

That the Karnataka Appropriation (No 6) Bill, 1982 be passed."

MR. SPEAKER.—The question is:

"That the Karnataka Appropriation (No. 6) Bill, 1982 be passed."

The Motion was adopted and the Bill was passed

STATEMENT BY THE MINISTER

Reg Death of persons due to explosion of Crackers in Bellary

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ ಈ ದಿವಸ ಬೆಳಿಗ್ಗೆ ಬಳ್ಳಾರಿ ನಗರದ ಬಣಗಾರ ರಸ್ತೆಯ ಒಂದು ಮನೆಯಲ್ಲಿ ಇದ ಆಸ್ಫೋಟನೆಯ ಬಗ್ಗೆ ಒಂದು ಹೇಳಿಕೆಯನ್ನು ಮಾಡಲಾಗುವುದೆಂದು ತಿಳಿಸಿತ್ತು. ಆದರಂತೆ ಈಗ ನಾನು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಒಂದು ಹೇಳಿಕೆಯನ್ನು ಈ ಮಾನ್ಯ ಸಭೆಯ ಅವಗಾಹನೆಗೆ ತರುವುದಕ್ಕೆ ಇಚ್ಛೆಪಡುತ್ತೇನೆ.

ಬಳ್ಳಾರಿ ನಗರದ ಬಣಗಾರ ರಸ್ತೆಯ ಒಂದು ಮನೆಯಲ್ಲಿ ಪಟಾಕಿಗಳನ್ನು ಕಾನೂನಿನ ವಿರುದ್ಧವಾಗಿ ತಯಾರಿಸುತ್ತಿದ್ದಾಗ ಆಕಸ್ಮಾತಾಗಿ ಆಸ್ಫೋಟನೆ ಉಂಟಾಗಿ ೮ ಜನರು ಮೃತಪಟ್ಟರೆಂದು ಮತ್ತು ೪ ಜನರಿಗೆ ಗಾಯ ಉಂಟಾಗಿದೆ ಎಂದು ತಿಳಿದು ಬಂದಿದೆ. ಈ ಆಸ್ಫೋಟನೆಯಲ್ಲಿ ೫ ಮನೆಗಳು ಕುಸಿದು ಬಿದ್ದವೆಂದು ವರದಿಯಾಗಿದೆ.

ಪೋಲೀಸರು, ಅಗ್ನಿಶಾಮಕ ದಳದವರು ಮತ್ತು ಜನರು ಒಟ್ಟಾಗಿ ಸಹಕರಿಸಿ ಕುಸಿದು ಬಿದ್ದ ಮನೆಯ ಅವಶೇಷಗಳನ್ನು ತೆಗೆದು ಕೆಳಗೆ ಸಿಕ್ಕಿಕೊಂಡವರನ್ನು ಹೊರಕ್ಕೆ ತೆಗೆದರು. ಈ ಸ್ಥಳದ ಅಕ್ಕ ಪಕ್ಕದ ಮನೆಗಳನ್ನು ಶೋಧಿಸಿ ಕೆಲವು ಮನೆಗಳಿಂದ ಪಟಾಕಿಗಳ ಮತ್ತು ಪಟಾಕಿಗಳನ್ನು ತಯಾರಿಸುವ ರಾಸಾಯನಿಕ ವಸ್ತುಗಳ ದಾಸ್ತಾನನ್ನ ತೆಗೆದು ಬೇರೆ ಕಡೆಗೆ ಸಾಗಿಸಲಾಯಿತು. ಭಾರತೀಯ ಆಸ್ಫೋಟನ ವಸ್ತುಗಳ ಅಧಿನಿಯಮದ ೯ನೇ ಕಲಂ ಪ್ರಕಾರ ಈ ಘಟನೆಯ ಕಾರಣಗಳ ಬಗ್ಗೆ ಮ್ಯಾಜಿಸ್ಟ್ರೇಟರಿಂದ ವಿಚಾರಣೆ ಮಾಡಲಾಗುವುದು. ಬಳ್ಳಾರಿ ನಗರದ ಬ್ರೂಸ್‌ಪೇಟ್ ಪೋಲೀಸ್ ಸ್ಟೇಷನ್ನಿನಲ್ಲಿ ಈ ವಿಷಯದಲ್ಲಿ ಕೇಸನ್ನು ದಾಖಲು ಮಾಡಿಕೊಳ್ಳಲಾಗಿದೆ ಮತ್ತು ತನಿಖೆ ನಡೆಯುತ್ತಿದೆ.

ಗಾಯಗೊಂಡವರನ್ನು ಬಳ್ಳಾರಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡಲಾಗುತ್ತಿದೆ ಬಳ್ಳಾರಿ ಜಿಲ್ಲಾಧಿಕಾರಿಗಳು ಮೃತಪಟ್ಟವರ ಕುಟುಂಬಗಳಿಗೆ ಶವ ಸಂಸ್ಕಾರಕ್ಕಾಗಿ ಧನ ಸಹಾಯ ಮಾಡಿದ್ದಾರೆ ಪ್ರತಿಯೊಂದು ಮರಣಕ್ಕೆ ಸಂಬಂಧಪಟ್ಟಂತೆ ೫,೦೦೦ ರೂಪಾಯಿ. ತೀವ್ರವಾಗಿ ಗಾಯಗೊಂಡವರಿಗೆ ತಲಾ ೧೫೦೦ ರೂಪಾಯಿ ಮತ್ತು ಸಾಧಾರಣವಾಗಿ ಗಾಯಗೊಂಡವರಿಗೆ ತಲಾ ೫೦೦ ರೂಪಾಯಿಂಗಳಂತೆ ಪರಿಹಾರ ನೀಡಲು ೪೫,೦೦೦ ರೂಪಾಯಿಗಳ ಮೊತ್ತವನ್ನು ಜಿಲ್ಲಾಧಿಕಾರಿಗಳಿಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಕೊಡಲಾಗಿದೆ. ಈ ಆಸ್ಫೋಟನೆಯಲ್ಲಿ ಮನೆಯನ್ನು ಕಳೆದು ಕೊಂಡವರಿಗೆ ತಿರುಗಿ ಮನೆ ಕಟ್ಟಿಸಿಕೊಳ್ಳುವುದಕ್ಕಾಗಿ ಆರ್ಥಿಕವಾಗಿ ಮತ್ತು ಗೃಹ ನಿರ್ಮಾಣ ಸಾಮಗ್ರಿಗಳನ್ನು ಒದಗಿಸುವುದರಲ್ಲಿ ಸೂಕ್ತವಾಗಿ ಸಹಾಯ ಮಾಡಲಾಗುವುದು.

ಅಧ್ಯಕ್ಷರು.—ಈ ದಿವಸ ಬೆಳಿಗ್ಗೆ ಮಾನ್ಯ ಸದಸ್ಯರಾದ ಪ್ರಭಾಕರ್‌ರವರು ಪ್ರಸ್ತಾಪ ಮಾಡುತ್ತಾ ಸ್ವಾಮಿ ನಾನು ಈ ಬೇಡಿಕೆಯ ಬಗ್ಗೆ ಮಾತನಾಡಬೇಕಾಗಿದೆ ಎಂದು ಕೊನೆ ಗಳಿಗೆಯಲ್ಲಿ ಪ್ರಸ್ತಾಪ ಮಾಡಿದರು ಮತ್ತು ಈ ಬೇಡಿಕೆಯ ಬಗ್ಗೆ ನಾನು ಮಾನ್ಯ ಮುಖ್ಯ ಸಚೇತಕರ ಕಡೆಗೆ ಒಂದು ಪತ್ರವನ್ನು ಸಹ ಬರೆದು ಕಳುಹಿಸಿ ಕೊಟ್ಟಿದ್ದೇನೆ ಎನ್ನುವ ಮಾತನ್ನು ಹೇಳಿದರು. ಆಗ ನಾನು I am not concerned with the whips" ಎಂದು ಒಂದು ಮಾತನ್ನು ಹೇಳಿದೆ. ಆದರೆ ಬಹಳ ಮಟ್ಟಿಗೆ

ಬೇರೆ ಅರ್ಥದಲ್ಲಿ ಆ ಮಾತನ್ನು ಬಳಸಲಿಲ್ಲ. ಸಾಮಾನ್ಯವಾಗಿ ಪ್ರತಿ ಸಾರಿಯೂ ಚರ್ಚೆ ಆದಮೇಲೆ ಕೊನೆಯ ಸಂದರ್ಭದಲ್ಲಿ ಅಂದರೆ ಮಂತ್ರಿಗಳು ಚರ್ಚೆಗೆ ಉತ್ತರ ಕೊಡುವುದಕ್ಕೆ ನಾನು ಕರೆದಾಗ ಶ್ರೀಮಾನ್ ಪ್ರಭಾಕರ್‌ರವರು ಮಾತನಾಡ ಪುದಕ್ಕೆ ಅವಕಾಶ ಕೊಡಬೇಕು ನಾನು ಚೀಫ್‌ವಿಪ್ ಆವರಿಗೆ ತಿಳಿಸಿದ್ದೆ, ಮತ್ತು ನಾನು ಅವರಿಗೆ ಪತ್ರ ಬರೆದಿದ್ದೆ ಎಂದು ಹೇಳುತ್ತಾರೆ. ಈ ಹಿನ್ನೆಲೆಯಲ್ಲಿ ನಾನು ಆ ಮಾತನ್ನು ಹೇಳಿದ್ದೇನೆಯೇ ವಿನಹ, ಸಚೇತಕರಿಗೆ ಕೆಲಸವಿಲ್ಲ ಇಲ್ಲಿ ಅವರ ಅವಶ್ಯಕತೆ ಇಲ್ಲ ಎನ್ನುವ ಅರ್ಥದಲ್ಲಿ ನಾನು ಆ ಮಾತನ್ನು ಬಳಸಲಿಲ್ಲ ಎರಡೂ ಪಕ್ಷದ ಮುಖ್ಯ ಸಚೇತಕರು ಕೂಡ ಈ ಸಭೆಯ ಕಾರ್ಯಕಲಾಪಗಳನ್ನು ಯಶಸ್ವಿಯಾಗಿ ನಡೆಸಲು ಹೆಚ್ಚು ಸಹಾಯ ಮಾಡಿದ್ದಾರೆ. ಆದ್ದರಿಂದ ನಾನು ಹೇಳಿದ ಮಾತಿನಿಂದ ಅವರು ಮನಸ್ಸಿಗೆ ನೋವು ಮಾಡಿಕೊಳ್ಳಬಾರದು ಎಂದು ನಾನು ಹೇಳುವುದಕ್ಕೆ ಇಚ್ಛಿಸುತ್ತೇನೆ.

Now the House stands adjourned to meet tomorrow at 1-P.M.

The House adjourned at five minutes past Seven of the Clock to meet again at One of the Clock on Friday, the 30th July 1982.